2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**ಎಸ್.ಸಿ.5027/2022**

ದಿಃ04.10.2024
ಚಾಸಾ-4 ಪ್ರಾಸಾ-4

| | |
|---|---|
| ಹೆಸರು | ಃ ಕೌಶಿಕ್ ಉಃ ಪುಟ್ಟ |
| ತಂದೆಯ ಹೆಸರು | ಃ ಟಿ.ಸಿ.ನಾರಾಯಣಗೌಡ |
| ವಯಸ್ಸು | ಃ 30 |
| ಉದ್ಯೋಗ | ಃ ವ್ಯವಸಾಯ |
| ವಾಸ | ಃ ಪಟೇಲ್ ಕಾಳೀರೇಗೌಡನದೊಡ್ಡಿ |

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)
**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ಚಾಸಾ-1 ರವರು ನನ್ನ ತಾಯಿ. ಚಾಸಾ-2 ರವರು ನನ್ನ ತಂಗಿಯ ಗಂಡ. ಚಾಸಾ-3 ರವರು ನನ್ನ ಸೋದರ ಮಾವ. ಚಾಸಾ-5 ರವರು ನನ್ನ ತಮ್ಮ. ಚಾಸಾ-6 ರವರು ನನ್ನ ತಂಗಿ. ದಿಃ09.05.2020 ರಂದು ಮಧ್ಯಾಹ್ನ 1-30 ಗಂಟೆ ಸಮಯದಲ್ಲಿ ನಾನು, ಚಾಸಾ-1 ರಿಂದ 3, 5 ರಿಂದ 7 ರವರು ನಮ್ಮ ಮನೆಯಲ್ಲಿರುವಾಗ, ಆರೋಪಿ-1 ರಿಂದ 6 ರವರು ಇನ್ನೋವಾ ಕಾರಿನಲ್ಲಿ ನಮ್ಮ ಮನೆಯ ಬಳಿ ಬಂದು ಮನೆಯ ಗೇಟಿನ ಬೀಗವನ್ನು ಒಡೆದು ಮನೆಯ ಒಳಗಡೆ ಬಂದು ನನ್ನನ್ನು ಮನೆಯಿಂದ ಹೊರಗಡೆ ಕಳುಹಿಸದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ 3 ನೇ ಆರೋಪಿಯೊಂದಿಗೆ ನನ್ನ ವಿವಾಹವನ್ನು ಮಾಡುವ ಸಲುವಾಗಿ ನಮ್ಮಗಳಿಗೆ ಜೀವ ಬೆದರಿಕೆ ಹಾಕಿರುತ್ತಾರೆ. 1 ರಿಂದ 6 ನೇ ಆರೋಪಿತರು ನನ್ನನ್ನು ಮನೆಯಿಂದ ಹೊರಗಡೆ ಎಳೆದುಕೊಂಡು ಹೋಗುವ ಸಮಯದಲ್ಲಿ ಚಾಸಾ-1 ರಿಂದ 3, 5 ರಿಂದ 7 ರವರು ನನ್ನನ್ನು ಆರೋಪಿತರ ಕೈಯಿಂದ ಬಿಡಿಸಿಕೊಳ್ಳಲು ಬಂದಾಗ, 5 ನೇ ಆರೋಪಿಯು ಚಾಸಾ-2 ರವರಿಗೆ ಚಾಕುವಿನಿಂದ ತಲೆಯ ಬಲಭಾಗಕ್ಕೆ ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾನೆ. ನಂತರ 4 ನೇ ಆರೋಪಿಯು ಕಬ್ಬಿಣದ ರಾಡಿನಿಂದ ಚಾಸಾ-3 ರವರ ಹಿಂಭಾಗದ ತಲೆಗೆ ಹಾಗೂ ಕಲ್ಲಿನಿಂದ ಕೈಗಳಿಗೆ ಹಲ್ಲೆ ಮಾಡಿ ರಕ್ತಗಾಯಪಡಿಸಿರುತ್ತಾನೆ. ಆರೋಪಿ-1 ರಿಂದ 6 ರವರು ಚಾಸಾ-1 ರವರ ಸೀರೆಯನ್ನು

ಎಳೆದಾಡಿ ಹಲ್ಲೆ ಮಾಡಿ ಅವಾಚ್ಯ ಶಬ್ಧಗಳಿಂದ ಬೈದು ನಿಂದಿಸಿರುತ್ತಾರೆ. ನಂತರ ಆರೋಪಿ-4 ಮತ್ತು 5 ರವರು ಚಾಸಾ-1 ರವರ ಸೀರೆಯನ್ನು ಎಳೆದು ಮಾನಭಂಗ ಮಾಡಲು ಪ್ರಯತ್ನಪಟ್ಟಿರುತ್ತಾರೆ. ಉಳಿದ ಆರೋಪಿತರು ಕೈಗಳಿಂದ ನನ್ನ ತಾಯಿಯ ಮೈಕೈಗೆ ಹೊಡೆದು ನೋವುಂಟು ಮಾಡಿರುತ್ತಾರೆ. ನಂತರ ಆರೋಪಿತರು ನನ್ನನ್ನು ಮನೆಯಿಂದ ಹೊರಗಡೆ ಕಳುಹಿಸದಿದ್ದರೆ ಜೀವಸಹಿತ ಬಿಡುವುದಿಲ್ಲವೆಂದ ಪ್ರಾಣ ಬೆದರಿಕೆ ಹಾಕಿರುತ್ತಾರೆ. ಜಗಳವನ್ನು ಬಿಡಿಸಲು ಗ್ರಾಮಸ್ಥರು ಬಂದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಸ್ಟೀಲ್ ಚಾಕು, ಕಬ್ಬಿಣದ ರಾಡು ಹಾಗೂ ಒಂದು ಕಲ್ಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-5 ರಿಂದ 7 ಎಂದು ಗುರುತಿಸಲಾಗಿರುತ್ತದೆ. ಆರೋಪಿತರು ನಮ್ಮ ಮನೆಯಲ್ಲಿ ಗಲಾಟೆ ಮಾಡುವ ಸಮಯದಲ್ಲಿ ನಮ್ಮ ಮನೆಯ ಕಿಟಕಿಯ ಗಾಜುಗಳನ್ನು ಒಡೆದು ನಷ್ಟ ಉಂಟುಮಾಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಸ್ಟೀಲ್ ಬೀಗ ಹಾಗೂ ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಘಟನಾ ಸಮಯದಲ್ಲಿ ಚಾಸಾ-3 ರವರು ಧರಿಸಿದ್ದ ಬಿಳಿ ಬನಿಯನ್‌ನ್ನು ನೋಡಿ ಗುರುತಿಸಿದ್ದು ಸದರಿ ಬನಿಯನ್‌ನ್ನು ಈಗಾಗಲೇ ಎಂಒ-2 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಘಟನಾ ಸಮಯದಲ್ಲಿ ಚಾಸಾ-2 ರವರು ಧರಿಸಿದ್ದ ಒಂದು ಕಪ್ಪು ಬಣ್ಣದ ಟಿಶರ್ಟನ್ನು ನೋಡಿ ಗುರುತಿಸಿದ್ದು ಸದರಿ ಟಿಶರ್ಟನ್ನು ಈಗಾಗಲೇ ಎಂಒ-1 ಎಂದು ಗುರುತಿಸಲಾಗಿರುತ್ತದೆ. ಆರೋಪಿತರು ಹಲ್ಲೆ ಮಾಡಿದ ನಂತರ ಚಾಸಾ-2 ಮತ್ತು 3 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಂಜಸ ಕಾರಣ ನೀಡದಿದ್ದ ಕಾರಣ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ - ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.